Office of the Senior Deputy Director
Local Audit Circle,
Room No-SA-1, 2nd floor,
Zilladalita Bhavana,
Chikkaballapura-562101
Phone No-08156 277033
E-mail: aclacchikkaballapura@gmail.com

ಕರ್ನಾಟಕ ಸರ್ಕಾರ
(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಹಿರಿಯ ಉಪ ನಿರ್ದೇಶಕರವರ ಕಛೇರಿ,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಕೊಠಡಿ ಸಂಖ್ಯೆ-SA-1, 2ನೇ ಮಹಡಿ,
ಜಿಲ್ಲಾಡಳಿತ ಭವನ,
ಚಿಕ್ಕಬಳ್ಳಾಪುರ-562101
ದೂರವಾಣಿ ಸಂಖ್ಯೆ-08156 277033
ಇ-ಮೇಲ್: aclacchikkaballapura@gmail.com

ಸಂಖ್ಯೆ:ಹಿಉನಿ/ಸ್ಥಲೆಪವ/ಚಿಮು/2020-21

ದಿನಾಂಕ:30/9/2020

29-30

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಸಂಖ್ಯೆ 582
ದಿನಾಂಕ 3.2.21
ಚಿಕ್ಕಬಳ್ಳಾಪುರ

ಇವರಿಗೆ

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ.

ಮಾನ್ಯರೆ

ವಿಷಯ : ಚಿಕ್ಕಬಳ್ಳಾಪುರ ನಗರ ಯೋಜನಾ/ಅಭಿವೃದ್ಧಿ ಪ್ರಾಧಿಕಾರದ 2017-18 ರ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ರವಾನಿಸುತ್ತಿರುವ ಬಗ್ಗೆ.

* * * * *

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 48(2) ರಂತೆ ಚಿಕ್ಕಬಳ್ಳಾಪುರ ನಗರ ಯೋಜನಾ/ಅಭಿವೃದ್ಧಿ ಪ್ರಾಧಿಕಾರದ 2017-18 ರ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ಲೆಕ್ಕಪರಿಶೋಧನಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ರವಾನಿಸಿದೆ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ ಹಾಗೂ ಪ್ರಾಧಿಕಾರವು ಸ್ವಂತ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಹಲವು ಸಲಹೆ ಹಾಗೂ ಸೂಚನೆಗಳನ್ನು ನೀಡಲಾಗಿದೆ. ಪ್ರಾಧಿಕಾರದ ಆಡಳಿತ ಸದರಿ ವರ್ಗದ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ಅದರ ಬಗ್ಗೆ ಅನುಸರಣಾ ವರದಿಯನ್ನು ಕಾಯ್ದೆಯ ಕಲಂ 48(6) ರಂತೆ ಸಕ್ಷಮ ಪ್ರಾಧಿಕಾರದ ಮುಖೇನ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಕಛೇರಿಗೆ ಕಳುಹಿಸಲು ಕೋರಿದೆ.

ಲೆಕ್ಕಪರಿಶೋಧನಾ ವರದಿ ತಲುಪಿದ ಬಗ್ಗೆ ಸ್ವೀಕೃತಿ ಕೋರಿದೆ.

ತಮ್ಮ ವಿಶ್ವಾಸಿ,

3/2/21

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

ಪ್ರತಿಯನ್ನು :

1. ನಿರ್ದೇಶಕರು, ನಗರ ಯೋಜನಾ ಪ್ರಾಧಿಕಾರ, ಎಮ್.ಎಸ್. ಬಿಲ್ಡಿಂಗ್ ಕೆ.ಆರ್.ವೃತ್ತ, ಬೆಂಗಳೂರು-01 ಇವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, 4ನೇ ಮಹಡಿ, 'ಎ' ಬ್ಲಾಕ್, ಟಿ.ಟಿಎಂ.ಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027.
3. ಕಛೇರಿ ಪ್ರತಿ

Scanned with OKEN Scanner

ಚಿಕ್ಕಬಳ್ಳಾಪುರ ನಗರ ಯೋಜನಾ ಪ್ರಾಧಿಕಾರ/ನಗರಾಭಿವೃದ್ಧಿ ಪ್ರಾಧಿಕಾರ ಸಂಸ್ಥೆಯ 2017–18ನೇ ಸಾಲಿನ
ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರಸ್ತಾಪಿಸಲಾದ ಪ್ರಮುಖವಾದ ನ್ಯೂನತೆಗಳು ಹಾಗೂ
ಆಕ್ಷೇಪಣೆಯಲ್ಲಿಡಲಾದ ಮತ್ತು ವಸೂಲಾತಿಗೆ ಸೂಚಿಸಿದ ಮೊತ್ತಗಳ ವಿವರ

ಕಂಡಿಕೆ	ಪ್ರಮುಖವಾದ ನ್ಯೂನತೆಗಳು	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
6	ರಸೀದಿ ದಾಸ್ತಾನು ನಿರ್ವಹಿಸದಿರುವುದು	–	–
8	ರಸೀದಿ ಪುಸ್ತಕಗಳಲ್ಲಿನ ನ್ಯೂನತೆಗಳು	–	–
10	ಆಯವ್ಯಯವನ್ನು ವಿಳಂಬವಾಗಿ ಅನುಮೋದಿಸಿರುವುದು	–	–
12	ವಾರ್ಷಿಕ ಲೆಕ್ಕಪತ್ರಗಳ ಕುರಿತು	–	–
13(ಅ)	ಎಫ್.ಡಿ. ಖಾತೆಗೆ ಸಂಬಂಧಿಸಿದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲ	1500000	–
19	ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ಪ್ರಾಧಿಕಾರಕ್ಕೆ ಆದಾಯ ತಪ್ಪಿ ನಷ್ಟವಾಗಿರುವುದು	333157683	–
23	ಪಾರ್ಕ್ ಅಭಿವೃದ್ಧಿ ಮತ್ತು ನಾಗರೀಕ ಸೌಲಭ್ಯ ದಾಖಲಿಸದಿರುವುದು	235743039	–
26	ನೂತನ ಅಂಶದ ಪಿಂಚಣಿ ವ್ಯವಕಲನ ಮೊತ್ತವನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮೆ ಮಾಡದಿರುವುದು	39626	–
27	ನಿಗದಿತ ಅವಧಿಯಲ್ಲಿ ಮಹಾ ಯೋಜನೆ (ಮಾಸ್ಟರ್ ಪ್ಲಾನ್) ತಯಾರಿಸದಿರುವುದು	–	–
28	ಕಟ್ಟಡ ಬಾಡಿಗೆ ಪಾವತಿಯಲ್ಲಿ ಆದಾಯ ತೆರಿಗೆಯನ್ನು ಕಟಾಯಿಸದಿರುವುದು	–	18656
	ಒಟ್ಟು	**570440348**	**18656**

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

Scanned with OKEN Scanner

ಚಿಕ್ಕಬಳ್ಳಾಪುರ ನಗರ ಯೋಜನಾ ಪ್ರಾಧಿಕಾರ/ನಗರಾಭಿವೃದ್ಧಿ ಪ್ರಾಧಿಕಾರ ಸಂಸ್ಥೆಯ 2017–18ನೇ ಸಾಲುಗಳ ಲೆಕ್ಕಪರಿಶೋಧನಾ ವರದಿ

ಭಾಗ–I

1) ಪ್ರಸ್ತಾವನೆ :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯಿದೆ 1961 ರ ಸೆಕ್ಷನ್ 68 ಸಿ (2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965 ರ ನಿಯಮ 23(1) ರಂತೆ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಸೆಕ್ಷನ್ 48(2) ರಂತೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2017–18ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಪ್ರಮುಖವಾದ ನ್ಯೂನತೆಗಳನ್ನು ಹಾಗೂ ಲೋಪದೋಷಗಳನ್ನು ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಾಧಿಕಾರದ ಆಡಳಿತ ವರ್ಗ ಸದರಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ಅದರ ಅನುಸರಣಾ ವರದಿಯನ್ನು ಸೆಕ್ಷನ್ 48(6) ರಂತೆ ಕಳುಹಿಸಲು ಸೂಚಿಸಿದೆ.

2) ಲೆಕ್ಕ ಪರಿಶೋಧನೆ ಕೈಗೊಂಡ ಬಗ್ಗೆ ವಿವರಗಳು :

ಲೆಕ್ಕ ಪರಿಶೋಧನಾ ತಂಡದ ವಿವರ	ಶ್ರೀ ಎನ್.ಸುಧಾಕರ್, ಲೆಕ್ಕಾಧೀಕ್ಷಕರು ಶ್ರೀಮತಿ ಭಾರತಿ, ಲೆಕ್ಕ ಪರಿಶೋಧಕರು ಶ್ರೀಮತಿ ಬಿ.ಭಾಗ್ಯಮ್ಮ, ಲೆಕ್ಕ ಪರಿಶೋಧಕರು
ಲೆಕ್ಕಪರಿಶೋಧನಾ ಅವಧಿ	2017–18
ಲೆಕ್ಕಪರಿಶೋಧನೆ ಪ್ರಾರಂಭಿಸಿದ ದಿನಾಂಕ	8–5–2018
ಲೆಕ್ಕಪರಿಶೋಧನೆ ಮುಕ್ತಾಯದ ದಿನಾಂಕ	19–5–2018
ಲೆಕ್ಕಪರಿಶೋಧನೆ ಬಳಸಿಕೊಂಡ ಮಾನವ ದಿನಗಳು	29 ಏಕ ಮಾನವ ದಿನಗಳು
ಕರಡು ತನಿಖಾ ವರದಿಯ ಪುನರ್ ಪರಿಶೀಲನಾಧಿಕಾರಿ ಹೆಸರು	ಶ್ರೀ ಕುಪ್ಪೂರ ಲಿಂಗಯ್ಯ, ಅಪರ ನಿರ್ದೇಶಕರು
ಪುನರ್ ಪರಿಶೀಲನಾ ದಿನಾಂಕ	21–09–2020

3) ಸಂಸ್ಥೆಯ ಆಡಳಿತ ವರ್ಗದ ವಿವರ :

ಅಧ್ಯಕ್ಷರು	ಶ್ರೀ ಎಸ್.ಎಂ.ಮುನಿಯಪ್ಪ	01–04–2017	31–03–2018
ಆಯುಕ್ತರು	ಶ್ರೀ ಟಿ.ಆರ್.ಗಂಗಾಧರಸ್ವಾಮಿ	01–04–2017	14–03–2018
	ಶ್ರೀಮತಿ ಪದ್ಮಾ ಅಮ್ಮೆಂಬಳ	14–03–2018	31–03–2018
ನಗರ ಯೋಜಕ ಸದಸ್ಯರು	ಶ್ರೀ ಕೃಷ್ಣಪ್ಪ	01–04–2017	31–03–2018

4) ಪ್ರಾಧಿಕಾರದ ರಚನೆ ಬಗ್ಗೆ :

ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ:ನಅಇ 155 ಬೆಂರೂಪ್ರಾ 2011, ದಿನಾಂಕ:13–12–2011 ರಲ್ಲಿ ಚಿಕ್ಕಬಳ್ಳಾಪುರ ನಗರ ಯೋಜನಾ ಪ್ರಾಧಿಕಾರವನ್ನು ರಚಿಸಿ, ಆನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 336 ಬೆಂರೂಪ್ರಾ 2014, ದಿನಾಂಕ:9–2–2015 ರಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರಂತೆ ನಗರಾಭಿವೃದ್ಧಿ ಪ್ರಾಧಿಕಾರವನ್ನಾಗಿ ಘೋಷಿಸಿರುತ್ತದೆ.

ಭಾಗ–2

ಪ್ರಸಕ್ತ ಲೆಕ್ಕಪರಿಶೋಧನೆ

5) ಪ್ರಸಕ್ತ ಲೆಕ್ಕಪರಿಶೋಧನೆ :

(1) ನಗದು ಶಿಲ್ಕು ಭೌತಿಕ ಪರಿಶೀಲನೆ :

ದಿನಾಂಕ:8–5–2018 ರಂದು ಕೈ ನಗದು ಶಿಲ್ಕನ್ನು ಭೌತಿಕವಾಗಿ ಪರಿಶೀಲಿಸಲಾಗಿ "ಯಾವುದೇ ಶಿಲ್ಕು" ಇರುವುದಿಲ್ಲ. ಕಛೇರಿ ನಗದು ಪುಸ್ತಕಕ್ಕೆ ತಾಳೆ ಇರುತ್ತದೆ.

Scanned with OKEN Scanner

(2) ಅಂಚೆ ಚೀಟಿಗಳ ಭೌತಿಕ ಪರಿಶೀಲನೆ :

ದಿನಾಂಕ:8-5-2018 ರಂದು ಅಂಚೆ ಚೀಟಿಗಳ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.1965 ಮೌಲ್ಯದ ಅಂಚೆ ಚೀಟಿಗಳದ್ದು ದಾಸ್ತಾನು ವಹಿಗೆ ತಾಳೆ ಇರುತ್ತದೆ.

6) ರಸೀದಿ ಪುಸ್ತಕಗಳ ದಾಸ್ತಾನು ವಿವರ :

2017-18 ನೇ ಸಾಲಿನ ಪ್ರಾಧಿಕಾರದ ರಸೀದಿ ಪುಸ್ತಕಗಳ ದಾಸ್ತಾನು ವಿವರ ಪರಿಶೀಲಿಸಲಾಯಿತು. ರಸೀದಿ ಪುಸ್ತಕಗಳ ದಾಸ್ತಾನು ವಹಿಯನ್ನು ನಿರ್ವಹಿಸಿರುವುದಿಲ್ಲ. ವಹಿಯನ್ನು ನಿರ್ವಹಿಸಿ, ರಸೀದಿ ಪುಸ್ತಕಗಳ ಸ್ವೀಕೃತಿ, ವಿತರಣೆಯನ್ನು ದಾಖಲಿಸುವಂತೆ ವರದಿ ಸೂಚಿಸಿದೆ. ಪ್ರಸ್ತಕ ಸಾಲಿನಲ್ಲಿ ಕಂಡು ಬಂದ ರಸೀದಿ ಪುಸ್ತಕಗಳ ಸ್ವೀಕೃತಿ ವಿತರಣೆ ಹಾಗೂ ಅಂತಿಮ ಶಿಲ್ಕಿನ ವಿವರಗಳು ಕೆಳಕಂಡಂತೆ ಇವೆ.

31-4-2017 ಕ್ಕೆ ಪ್ರಾರಂಭಿಕ ಶಿಲ್ಕು	80 (24-60, 8-52)
2017-18 ರ ಸಾಲಿನ ಖರೀದಿ	-
ಒಟ್ಟು ಪುಸ್ತಕಗಳು	80
2017-18 ರ ಸಾಲಿನ ಉಪಯೋಗಿಸಿರುವುದು	04 (9,10,11,12)
31-03-2018 ಕ್ಕೆ ಅಂತಿಮ ಶಿಲ್ಕು	76 (23-60, 13-52)

2017-18 ರ ಸಾಲಿನಲ್ಲಿ ಉಪಯೋಗಿಸಿರುವ ರಸೀದಿ ಪುಸ್ತಕಗಳ ವಿವರ

ರಸೀದಿ ಪುಸ್ತಕ ಸಂಖ್ಯೆ	ರಸೀದಿ ಸಂಖ್ಯೆ/ದಿನಾಂಕ
8	367/5-4-2017 / 400/19-5-2017 (2016-17ರ ಭಾಗಶಃ)
9	401/20-5-2017 / 450/14-9-2017
10	451/14-9-2017 / 500/5-12-2017
11	551/6-12-2017 / 600/30-01-2018

ಪ್ರಸಕ್ತ ಸಾಲಿನಲ್ಲಿ ಈ ಕೆಳಕಮಡಂತೆ ಭಾಗಸಃ ಪರಿಶೀಲಿಸಿದ ಸದರಿ ಪುಸ್ತಕಗಳನ್ನು ಮುಮದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ.

ರಸೀದಿ ಪುಸ್ತಕ ಸಂಖ್ಯೆ	ಕೊನೆ ರಸೀದಿ/ದಿನಾಂಕ
12	501/31-01-2018 ರಿಂದ 549/28-03-2018
24	1181

7) ಖಾಸಗಿ ಮುದ್ರಣಾಲಯದಿಂದ ಮುದ್ರಿಸಿರುವ ರಸೀದಿ ಪುಸ್ತಕಗಳನ್ನು ಉಪಯೋಗಿಸುತ್ತಿರುವ ಬಗ್ಗೆ :

ನಕ್ಷೆ ಮಂಜೂರಾತಿಗೆ ಸಂಬಂಧಪಟ್ಟಂತೆ ಭೂ ಪರಿವರ್ತನೆ/ವಿನ್ಯಾಸ/ಬದಲಾವಣೆ ಹಾಗೂ ಇತರೆ ವಸೂಲಾತಿ ಮೊತ್ತಗಳನ್ನು ಪ್ರಾಧಿಕಾರದಲ್ಲಿ ರಸೀದಿಗಳ ಮೂಲಕ ವಸೂಲಿಸಲಾಗುತ್ತಿದ್ದು, ಸದರಿ ರಸೀದಿ ಪುಸ್ತಕಗಳನ್ನು ಸ್ಥಳೀಯ ಖಾಸಗಿ ಸಂಸ್ಥೆಗಳ ಮುದ್ರಣಾಲಯದಿಂದ ಮುದ್ರಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ರೀತಿ ಖಾಸಗಿ ಮುದ್ರಣಾಲಯದಲ್ಲಿ ಮುದ್ರಿಸಿರುವ ರಸೀದಿ ಪುಸ್ತಕಗಳನ್ನು ಉಪಯೋಗಿಸಿಕೊಳ್ಳಲು ಅವಕಾಶವಿರುವುದಿಲ್ಲ. ಆದ್ದರಿಂದ ಸರ್ಕಾರಿ ಮುದ್ರಣಾಲಯದಿಂದ ಮುದ್ರಿಸಿರುವ ಮೂಲ ಹಾಗೂ ದ್ವಿ ಪ್ರತಿಗಳಿರುವ ಕಾರ್ಬನ್ ಇಂಪ್ರೆಶನ್ ಬೀಳುವ ರಸೀದಿ ಪುಸ್ತಕಗಳನ್ನು ಉಪಯೋಗಿಸುವುದು ನಿಯಮವಾಗಿರುತ್ತದೆ. ಮುಂದಿನ ಅವಧಿಯಲ್ಲಿ ಈ ಬಗ್ಗೆ ಆಡಳಿತ ಮಂಡಳಿಯವರು ಕ್ರಮ ಕೈಗೊಂಡು ನಿರ್ವಹಿಸಲು ಲೆಕ್ಕಪರಿಶೋಧನೆಯು ಸೂಚಿಸುತ್ತದೆ. ಖಾಸಗಿ ಮುದ್ರಣಾಲಯದ ಮುದ್ರಿಸಿರುವ ಪುಸ್ತಕಗಳನ್ನು ಉಪಯೋಗಿಸಲಾಗಿರುವುದರಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಿಸಿದ ಆಯುಕ್ತರೇ ಜವಾಬ್ದಾರರಾಗಿರುತ್ತಾರೆ.

8) ರಸೀದಿ ಪುಸ್ತಕಗಳಲ್ಲಿನ ನ್ಯೂನತೆಗಳು :

2017-18 ನೇ ಸಾಲಿನ ಲೆಕ್ಕ ತಪಾಸಣೆ ಸಮಯದಲ್ಲಿ ಪರಿಶೀಲಿಸಲಾದ ರಸೀದಿ ಪುಸ್ತಕಗಳಲ್ಲಿ ಕಂಡು ಬಂದ ನ್ಯೂನತೆಗಳು ಈ ರೀತಿ ಇವೆ.

1. ರಸೀದಿ ಪುಸ್ತಕವು ಒಳಗೊಂಡಿರುವ ಒಟ್ಟು ರಸೀದಿಗಳ ಸಂಖ್ಯೆ ಹಾಗೂ ವಿತರಿಸಿದ ದಿನಾಂಕ ಬಗ್ಗೆ ದೃಢೀಕರಣ ಇರುವುದಿಲ್ಲ. ಘೋಷ್ವಾರೆ ಹಾಕಿ ಧೃಢೀಕರಿಸಿರುವುದು.

Scanned with OKEN Scanner

2. ರಸೀದಿ ಪುಸ್ತಕಗಳು ಕಛೇರಿ/ಸಂಸ್ಥೆಯ ಆದಾಯ ಸ್ವೀಕೃತಿಗಳಿಗೆ ಸಂಬಂಧಿಸಿದ ಪ್ರಮುಖ ದಾಖಲಾತಿಯಾಗಿರುವುದರಿಂದ ಅವುಗಳನ್ನು ನಿಗದಿತ ನಮೂನೆಯಲ್ಲಿ ಕ್ರಮಬದ್ಧವಾಗಿ ಮುದ್ರಿಸಿಕೊಂಡು, ಕ್ರಮ ಸಂಖ್ಯೆವಾರು ನಿರ್ವಹಿಸಿಕೊಂಡು ಸರಿಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ.

9) <u>ಬಡಾವಣೆ ನಕ್ಷೆ, ಕಟ್ಟಡ ನಕ್ಷೆ ಮತ್ತು ಭೂ ಉಪಯೋಗ ಅರ್ಜಿ ಫಾರಂಗಳ ದಾಸ್ತಾನು</u> :

ಪ್ರಾಧಿಕಾರವು ವಿನ್ಯಾಸ ಅನುಮೋದನೆಗಾಗಿ 4 ಪುಟಗಳ ಅರ್ಜಿ ನಮೂನೆಯನ್ನು ತಯಾರಿಸಿದ್ದು, ಪ್ರತಿ ಅರ್ಜಿಗೆ ರೂ.100 ರಂತೆ ವಸೂಲಿಸಲು ತೀರ್ಮಾನಿಸಿದ್ದು, ಅರ್ಜಿಯನ್ನು ಜೆರಾಕ್ಸ್ ಮಾಡಿ ತದ ನಂತರ ಸದರಿ ಅರ್ಜಿಗೆ ಸಂಖ್ಯೆ ನೀಡಿ ವಿತರಿಸುವ ಪದ್ಧತಿಯನ್ನು ರೂಢಿಸಿಕೊಂಡಿರುವುದು ಕಂಡು ಬಂದಿರುತ್ತದೆ. ರೂ.100 ಶುಲ್ಕ ವಸೂಲಿ ಮಾಡಿ ಜಮಾ ಮಾಡುತ್ತಿರುತ್ತಾರೆ. ಆದರೆ ಬಡಾವಣೆ ನಕ್ಷೆ, ಕಟ್ಟಡ ನಕ್ಷೆ, ಭೂ ಬದಲಾವಣೆ ಅರ್ಜಿ ನಮೂನೆಯನ್ನು ವಿತರಿಸಿರುವುದಿಲ್ಲ. ಅರ್ಜಿಗಳನ್ನು ಜೆರಾಕ್ಸ್ ಮಾಡಿ ರೂ.100 ಪ್ರತಿ ಅರ್ಜಿಗೆ ವಸೂಲಿ ಮಾಡುವುದಾಗಿ ತಿಳಿಸಿರುತ್ತಾರೆ. ಇನ್ನು ಮುಂದೆ ಅರ್ಜಿ ಫಾರಂಗಳನ್ನು ಪ್ರತ್ಯೇಕವಾಗಿ ಪ್ರಿಂಟ್ ಮಾಡಿ ದಾಸ್ತಾನಿಗೆ ತೆಗೆದುಕೊಂಡು ವಿತರಿಸುವಂತೆ ವರದಿ ಸೂಚಿಸಿದೆ

10) <u>ಆಯವ್ಯಯವನ್ನು ವಿಳಂಬವಾಗಿ ಅನುಮೋದಿಸಿರುವುದು</u> :

ನಗರ ಯೋಜನಾ ಪ್ರಾಧಿಕಾರದ 2017–18 ರ ಸಾಲಿನ ಆಯವ್ಯಯವನ್ನು ತಯಾರಿಸಿ ಅನುಮೋದನೆ ಪಡೆದಿರುವ ಬಗ್ಗೆ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿರುವುದಿಲ್ಲ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಸೆಕ್ಷನ್ 43 ರಂತೆ ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರತಿ ವರ್ಷ ಫೆಬ್ರವರಿ 1 ರ ಒಳಗೆ ವಿಶೇಷ ಸಭೆ ಕರೆದು ಮುಂಬರುವ ಆರ್ಥಿಕ ವರ್ಷದ ಆಯವ್ಯಯವನ್ನು ಮಂಡಿಸಿ ಸೆಕ್ಷನ್ 45 ರಂತೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಸರ್ಕಾರವು ಆಯವ್ಯಯವನ್ನು ಪರಿಷ್ಕರಿಸುವ ಅಧಿಕಾರ ಹೊಂದಿರುತ್ತದೆ.

ಆರ್ಥಿಕ ವರ್ಷ ಪ್ರಾರಂಭವಾದ ನಂತರ ಘಟನೋತ್ತರವಾಗಿ ಆಯವ್ಯಯವನ್ನು ಅನುಮೋದಿಸುವ ಕ್ರಮ ಶಾಸನಾತ್ಮಕ ನಿಬಂಧನೆಗಳ ಉಲ್ಲಂಘನೆಯಾಗುತ್ತದೆ. ಏಕೆಂದರೆ ಸದರಿ ಕಾಯ್ದೆಯ ಸೆಕ್ಷನ್ 47 ರಂತೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸದೇ ಯಾವುದೇ ವೆಚ್ಚ ಭರಿಸುವಂತಿಲ್ಲ.

ಪ್ರಾಧಿಕಾರವು ಇನ್ನು ಮುಂದೆ ಆಯವ್ಯವನ್ನು ವಾಸ್ತವಿಕ ಅಂಕಿ ಅಂಶಗಳ ಆಧಾರದ ಮೇಲೆ ತಯಾರಿಸಿ ಶಾಸನಾತ್ಮಕ ನಿಭಂದನೆಗಳಂತೆ ಆರ್ಥಿಕ ವರ್ಷ ಪ್ರಾರಂಭಕ್ಕೆ ಅನುಮೋದನೆ ಸಭೆಯಲ್ಲಿ ಮಂಡಿಸಿ ಸರ್ಕಾರದಿಂದ ಅನುಮೋದನೆ ಪಡೆದುಕೊಳ್ಳುವುದು.

11) <u>ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚದ ಬಗ್ಗೆ</u> :

ಪ್ರಾಧಿಕಾರದ ಕಳೆದ 4 ವರ್ಷಗಳ ಸಾಮಾನ್ಯ ಆದಾಯ ಮತ್ತು ಸಾಮಾನ್ಯ ವೆಚ್ಚದ ಅಂಕಿ ಅಂಶಗಳು ಈ ಕೆಳಕಂಡಂತಿದೆ.

ಸಾಲು	ಸಾಮಾನ್ಯ ಆದಾಯ	ಸಾಮಾನ್ಯ ಖರ್ಚು
2014–15	22571888	12645421
2015–16	9446105	43599176
2016–17	29571343	22268347
2017–18	32620473	23390266
ಒಟ್ಟು	**94209809**	**101903210**

ಪ್ರಾಧಿಕಾರವು ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಕಲಂ 18ರಂತೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಕಲಂ 20ರಂತೆ ಸಂಗ್ರಹಿಸುವ ಉತ್ತಮತೆ ಶುಲ್ಕಗಳನ್ನು ಪರಿಷ್ಕರಿಸಿ ಸಾಮಾನ್ಯ ಆದಾಯ ಹೆಚ್ಚಿಸಿಕೊಳ್ಳುವುದು.

12) <u>ವಾರ್ಷಿಕ ಲೆಕ್ಕ ಪತ್ರಗಳ ಕುರಿತು</u> :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961 ರ ಸೆಕ್ಷನ್ 68 ಡಿ ರಂತೆ ಪ್ರತಿ ನಗರ ಯೋಜನಾ ಪ್ರಾಧಿಕಾರವು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಆರ್ಥಿಕ ವರ್ಷ ಮುಕ್ತಾಯದ ಮೂರು ತಿಂಗಳೊಳಗೆ ಸರ್ಕಾರಕ್ಕೆ, ನಿರ್ದೇಶಕರು ನಗರ & ಗ್ರಾಮಾಂತರ ಯೋಜನಾ ನಿರ್ದೇಶನಾಲಯ ಹಾಗೂ ಯೋಜನಾ ಮಂಡಳಿಗೆ ಸಲ್ಲಿಸಬೇಕಾಗಿರುತ್ತದೆ. ಸೆಕ್ಷನ್ 4 & 114 ರಂತೆ ಆಯುಕ್ತರು /ಸದಸ್ಯ ಕಾರ್ಯದರ್ಶಿಗಳ ಕರ್ತವ್ಯ ಆಗಿರುತ್ತದೆ. ಅದರಂತೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವು 2017–18 ರ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ:31–01–2020 ರಂದು ಅಂದರೆ ಸುಮಾರು ಒಂದು ವರ್ಷ 07 ತಿಂಗಳು ತಡವಾಗಿ ಸಲ್ಲಿಸಿರುತ್ತಾರೆ. ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತದೆ.

Scanned with OKEN Scanner

1. 2017–18 ರ ಸಾಲಿನಲ್ಲಿ ಸಂಸ್ಥೆಯ ಖರ್ಚಿಗಿಂತಲೂ ರೂ.25285865 ಗಳ ಆದಾಯ ಹೆಚ್ಚಾಗಿರುತ್ತದೆ. ಬ್ಯಾಲನ್ಸ್ ಶೀಟ್ ಅನುಬಂಧ 4 & 5 ರಂತೆ ಕಡಿತಗೊಳಿಸಿರುವ ಶಾಸನಾತ್ಮಕ ತೆರಿಗೆಗಳ ಬಾಕಿ ರೂ.185432 ಗಳಾಗಿದ್ದು ಕೂಡಲೇ ಪಾವತಿ ಮಾಡಲು ಕ್ರಮ ಕೈಗೊಳ್ಳುವುದು ಅಗತ್ಯವಾಗಿರುತ್ತದೆ.
2. ಸಮತೋಲನಾ ಪಟ್ಟಿಯ ಆಸ್ತಿಗಳ ಭಾಗದಲ್ಲಿ Current Assets ನಲ್ಲಿ 2015–16 ರಿಂದ 2017–18 ರವರೆಗೆ TDS Receivables ಎಂದು ರೂ.978422 ಗಳನ್ನು ನಮೂದಿಸಿದ್ದು ಸಂಬಂಧಿಸಿದ ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಿರುವುದಿಲ್ಲ.
3. ಸಮತೋಲನಾ ಪಟ್ಟಿ/Balance Sheet ಹೊಣೆಗಾರಿಕೆ/Liabilities ಭಾಗದಲ್ಲಿ ಸಾಮಾನ್ಯ ನಿಧಿ/ನಗರಾಭಿವೃದ್ಧಿ ಪ್ರಾಧಿಕಾರದ ನಿಧಿ ರೂ.45454785 ಲಭ್ಯವಿದ್ದು ಸದರಿ ಮೊತ್ತವನ್ನು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವುದು ಅಥವಾ ಹೂಡಿಕೆ ಮಾಡುವುದು ಅಭಿವೃದ್ಧಿ ದೃಷ್ಟಿಯಿಂದ ಸೂಕ್ತವಾಗಿರುತ್ತದೆ.
4. ಸಮತೋಲನಾ ಪಟ್ಟಿ/ Balance Sheet ಹೊಣೆಗಾರಿಕೆ/Liabilities ಭಾಗದಲ್ಲಿ ಕೆರೆ ಅಭಿವೃದ್ಧಿ ಶುಲ್ಕ ರೂ.75937366 ಲಭ್ಯವಿದ್ದು ಕ್ರಿಯಾ ಯೋಜನೆ ರೂಪಿಸಿ ನಿಯಮಾನುಸಾರ ಕೆರೆಗಳ ಪುನಶ್ಚೇತನ ಕಾಮಗಾರಿಗಳಿಗೆ ವಿನಿಯೋಗಿಸುವುದು ಅಗತ್ಯವಾಗಿರುತ್ತದೆ.

13) ಆರ್ಥಿಕ ಪರಿಸ್ಥಿತಿ :

ಚಿಕ್ಕಬಳ್ಳಾಪುರ ನಗರ ಯೋಜನಾ ಪ್ರಾಧಿಕಾರವು 2017–18 ರ ಅಂತ್ಯಕ್ಕೆ ಆರ್ಥಿಕ ವಹಿವಾಟನ್ನು ಮೂರು ಬ್ಯಾಂಕ್ ಖಾತೆಗಳಲ್ಲಿ ನಡೆಸುತ್ತಿದ್ದು ವಿವರಗಳು ಕೆಳಕಂಡಂತಿವೆ. ವಿವರ ಅನುಬಂಧ–1 ರಲ್ಲಿ ನೀಡಲಾಗಿದೆ.

1–4–2017 ಕ್ಕೆ ಪ್ರಾರಂಭಿಕ ಶಿಲ್ಕು	13617762
2017–18 ರ ಸ್ವೀಕೃತಿ	32620463
ಒಟ್ಟು	46238225
2017–18 ರ ಪಾವತಿ	23390266
31–3–2018 ಕ್ಕೆ ಅಂತಿಮ ಶಿಲ್ಕು	22847959

(ಅ) ಎಫ್.ಡಿ. ಖಾತೆಗೆ ಸಂಬಂಧಿಸಿದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲ :

2017–18 ರ ಸಾಲಿನ ಪ್ರಾಧಿಕಾರದಲ್ಲಿ ಎಫ್.ಡಿ. ಖಾತೆ ಸಂಖ್ಯೆ:3561260673 ರಲ್ಲಿ ವೆಚ್ಚ ಮಾಡಲಾದ ರೂ.1500000 ಕ್ಕೆ ಯಾವುದೇ ವಿವರಗಳನ್ನು ಹಾಜರುಪಡಿಸಿಲ್ಲ. ಆದುದರಿಂದ ವೆಚ್ಚ ಮಾಡಲಾದ **ರೂ.1500000** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

14) ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ :

2017–18 ರ ಸಾಲಿನ ಪ್ರಾಧಿಕಾರದಲ್ಲಿ ಸ್ವೀಕರಿಸಿದ ಜಮಾ ಹಾಗೂ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿಯನ್ನು ನಿರ್ವಹಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಲಾಗಿದೆ. ಅದರಂತೆ ಹಾಗೂ ಪ್ರಾಧಿಕಾರದವರು ನೀಡಿದ ವಿವರ ಗಳಂತೆ 2017–18ರ ಸಾಲಿನ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–2 ರಲ್ಲಿ ವರದಿಗೆ ಲಗತ್ತಿಸಲಾಗಿದೆ.

15) ಅನುದಾನಗಳು :

2017–18ರ ಸಾಲಿನಲ್ಲಿ ಪ್ರಾಧಿಕಾರಕ್ಕೆ ಯಾವುದೇ ರೀತಿಯ ಅನುದಾನ ಹೊಂದಾಣಿಕೆ ಆಗಿರುವುದಿಲ್ಲ.

16) ಸಾಲಗಳು :

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಸೆಕ್ಷನ್ 40ರಂತೆ ಪ್ರಾಧಿಕಾರವು ತನ್ನ ಕಾರ್ಯ ಚಟುವಟಿಕೆಗಳಿಗಾಗಿ ಸರ್ಕಾರದ ಪೂರ್ವಾನುಮತಿ ಪಡೆದು ಸಾಲ ಪಡೆಯಲು ಅವಕಾಶವಿರುತ್ತದೆ. ಪ್ರಾಧಿಕಾರವು ಸರ್ಕಾರದಿಂದ ಅಥವಾ ಹಣಕಾಸು ಸಂಸ್ಥೆಗಳಿಂದ ಯಾವುದೇ ಸಾಲ ಪಡೆದಿರುವುದಿಲ್ಲ.

17) ವಂತಿಕೆಗಳು :

ಪ್ರಾಧಿಕಾರವು 2017–18ನೇ ಸಾಲಿನಲ್ಲಿ ಯಾವುದೇ ವಂತಿಕೆಯನ್ನು ಸ್ವೀಕರಿಸಿರುವುದಿಲ್ಲ. ಆದರೆ ಈ ಕೆಳಕಂಡಂತೆ ವಂತಿಕೆಯನ್ನು ಪಾವತಿಸಿರುತ್ತದೆ.

Scanned with OKEN Scanner

18) ವಹಿಗಳ ನಿರ್ವಹಣೆ ಬಗ್ಗೆ :

i. ಸ್ಥಿರಾಸ್ತಿ ಮತ್ತು ಚರಾಸ್ತಿ ವಹಿ :

ಪ್ರಾಧಿಕಾರವು ಹೊಂದಿರುವ ಸ್ಥಿರ ಮತ್ತು ಚರ ಆಸ್ತಿಗಳ ಬಗ್ಗೆ ವಹಿಯನ್ನು ನಿರ್ವಹಿಸುವುದು. ಆರ್ಥಿಕ ವರ್ಷಾಂತ್ಯಕ್ಕೆ ಸಾಮಗ್ರಿಗಳ ಭೌತಿಕ ದಾಸ್ತಾನು ಸತ್ಯಾಪನೆ ಮಾಡಿ ಅದರ ಫಲಿತಾಂಶವನ್ನು ವಹಿಯಲ್ಲಿ ನಮೂದಿಸುವುದು.

ii. ಠೇವಣಿ ವಹಿ :

ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದಾಗ ಸಾರ್ವಜನಿಕರು ಪಾವತಿಸುವ ಪ್ರಾರಂಭಿಕ ಠೇವಣಿ ವಿವರಗಳನ್ನು ಠೇವಣಿ ವಹಿಯಲ್ಲಿ ನಮೂದಿಸಿ ಪ್ರತಿ ವರ್ಷಾಂತ್ಯಕ್ಕೆ ಫೋಷ್ಟಾರೆ ನಮೂದಿಸುವುದು. ಠೇವಣಿ ಮರು ಪಾವತಿ ಮಾಡುವಾಗ ಠೇವಣಿ ವಹಿಯಲ್ಲಿ ಷರಾ ನಮೂದಿಸಿ ಮರುಪಾವತಿ ಮಾಡುವುದು.

19) ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ಪ್ರಾಧಿಕಾರಕ್ಕೆ ಬರಬಹುದಾಗಿದ್ದ ಹೆಚ್ಚಿನ ಆದಾಯ ತಪ್ಪಿ ನಷ್ಟವಾಗಿರುವುದು :

ಪ್ರಾಧಿಕಾರವು ಖಾಸಗಿ ಭೂ ಪರಿವರ್ತನೆ ವಿನ್ಯಾಸ ನಕ್ಷೆಗಳನ್ನು ಅನುಮೋದಿಸುವಾಗ ಸರ್ಕಾರಿ ಅಧಿಸೂಚನೆ ಹೆಚ್‌ಯುಡಿ 507 ಟಿಟಿಪಿ 93 ಬೆಂಗಳೂರು ದಿನಾಂಕ:19-11-1993ರಲ್ಲಿ ನಿಗದಿಪಡಿಸಿದ ದರಗಳಂತೆ ಉತ್ತಮತೆ ಶುಲ್ಕವನ್ನು ವಸೂಲಿ ಮಾಡುತ್ತಿರುತ್ತಾರೆ.

ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆ, 1961 ರ ಸೆಕ್ಷನ್ 18ರಲ್ಲಿ ಉತ್ತಮತೆ ಶುಲ್ಕವನ್ನು ಕೆಳಕಂಡ ದರಗಳಲ್ಲಿ ಸಂಗ್ರಹಿಸಬೇಕೆಂದು ಶಾಸನಾತ್ಮಕ ನಿಬಂಧನೆಯನ್ನು ವಿಧಿಸಲಾಗಿದೆ.

"Where Permissions for change of land use or development of land or bulding is granted under section 14A or section 14B or section 15 or section 17 and such change of land use or development is capable or yielding a better income to the owner the planning Authority may levy a prescribed fee not exceeding one- third of the estimated increase in the value of the land or building in the prescribed manner for permitting such change of land use or development of Land or building"

ಪ್ರಸ್ತುತ 1993 ರಲ್ಲಿ ನಿಗದಿಪಡಿಸಿದ ದರಗಳಲ್ಲಿ ಈಗಲೂ ಉತ್ತಮತೆ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಆದರೆ 1993ರಿಂದ ಇಲ್ಲಿಯವರೆಗೆ ಭೂಮಿಯ ಮೌಲ್ಯದಲ್ಲಿ ಅಗಾಧ ಹೆಚ್ಚಳ ಉಂಟಾಗಿರುತ್ತದೆ. ಸರ್ಕಾರವು ಆಗ್ಗಿಂದಾಗ್ಗೆ ಭೂಮಿಯ ಮಾರ್ಗಸೂಚಿ ಮೌಲ್ಯ (guidance value) ವನ್ನು ಪರಿಷ್ಕರಿಸಿರುತ್ತದೆ. ಆದರೂ ನಗರ ಯೋಜನಾ ಇಲಾಖೆಯ ಉತ್ತಮತೆ ಶುಲ್ಕದ ದರಗಳನ್ನು ಪರಿಷ್ಕರಿಸದಿರುವುದರಿಂದ ಯೋಜನಾ ಪ್ರಾಧಿಕಾರಕ್ಕೆ ಬರಬಹುದಾಗಿದ್ದ 27.52 ಕೋಟಿ ರೂಗಳು ಹೆಚ್ಚುವರಿ ಆದಾಯ ತಪ್ಪಿ ಹೋಗಲು ಕಾರಣವಾಗಿರುತ್ತದೆ. ಪ್ರಾಧಿಕಾರದ ಆಡಳಿತ ವರ್ಗ ಈ ಬಗ್ಗೆ ತತ್‌ಕ್ಷಣದ ಕ್ರಮ ಕೈಗೊಂಡು ಪ್ರಾಧಿಕಾರದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಕಾಯ್ದೆಯ ನಿಬಂಧನೆಗಳಂತೆ ಕೃಷಿ ಉದ್ದೇಶದಿಂದ ಇತರೆ ಉದ್ದೇಶಕ್ಕೆ ಭೂ ಪರಿವರ್ತನೆಗೊಂಡು ವಿನ್ಯಾಸ ನಕ್ಷೆ ಅನುಮೋದಿಸುವಾಗ ಉತ್ತಮತೆ ಶುಲ್ಕವನ್ನು ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಸೆಕ್ಷನ್ 18ರಂತೆ ವಸೂಲಿ ಮಾಡಲು ಕ್ರಮ ವಹಿಸುವುದು.

ಪ್ರಾಧಿಕಾರವು 2017-18 ರ ಸಾಲಿನಲ್ಲಿ ಉತ್ತಮತೆ ಶುಲ್ಕ ಕಡಿಮೆ ವಸೂಲಿಸಿರುವ ವಿವರಗಳನ್ನು ಅನುಬಂಧ-4 ರಲ್ಲಿ ನೀಡಿದೆ.

ಸಾಲು	ಉತ್ತಮತೆ ಶುಲ್ಕ ಕಡಿಮೆ ವಸೂಲಿ ಮಾಡಿರುವುದು (ರೂ.ಗಳಲ್ಲಿ)
2017-18	333157682.75
ಒಟ್ಟು	**333157682.75**

ಮೇಲ್ಕಂಡಂತೆ **ರೂ.333157682.75** ಗಳನ್ನು ಸಂಬಂಧಪಟ್ಟ ಬಡಾವಣೆ ಮಾಲೀಕರಿಂದ ವಸೂಲಿ ಮಾಡುವವರೆಗೂ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

20) ಅಭಿವೃದ್ಧಿಯ ನಂತರ ಮಾರುಕಟ್ಟೆ ಮೌಲ್ಯವನ್ನು ಉಪ ನೋಂದಣಾಧಿಕಾರಿಯವರು ಅವೈಜ್ಞಾನಿಕವಾಗಿ ನಿಗದಿಪಡಿಸಿರುವುದು :

2017-18ನೇ ಸಾಲಿನಲ್ಲಿ ತೋರಿಸಿರುವಂತೆ ಉತ್ತಮತಾ ಶುಲ್ಕ ವಸೂಲಾತಿಯು ಋಣಾತ್ಮಕ ಮೌಲ್ಯವಾಗಿರುವುದು ಕಂಡು ಬಂದಿರುತ್ತದೆ.

Scanned with OKEN Scanner

ಸಾಲು	ಉತ್ತಮತೆ ಶುಲ್ಕ ಋಣಾತ್ಮಕ ಮೌಲ್ಯ ಕಂಡು ಬಂದಿರುವುದು (ರೂ.ಗಳಲ್ಲಿ)
2017–18	11642257.63
ಒಟ್ಟು	**11642257.63**

ಉಪ ನೋಂದಣಾಧಿಕಾರಿಯವರು ಬಡಾವಣೆಯ ಅಭಿವೃದ್ಧಿಯ ನಂತರ ನಿವೇಶನದ ಮಾರುಕಟ್ಟೆ ಮೌಲ್ಯವನ್ನು ವಾಸ್ತವಾಂಶಕ್ಕಿಂತ ಕಡಿಮೆ ನಿಗದಿಪಡಿಸಿರುವುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಪ್ರಕರಣ 18 ರಂತೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಬರಬೇಕಾದ ಲಾಭಾಂಶದ 1/3 ಭಾಗವನ್ನು ಸಂಬಂಧಿಸಿದ ಬಡಾವಣೆ ಮಾಲೀಕರಿಂದ ವಸೂಲಿಸಲು ಇದರಿಂದ ಸಾಧ್ಯವಾಗುತ್ತಿಲ್ಲ. ಸದರಿ ಬಡಾವಣೆಗಳಲ್ಲಿ ಅಭಿವೃದ್ಧಿ ದರಕ್ಕಿಂತ ನಿವೇಶನದ ಮಾರಾಟ ಬೆಲೆ ಕಡಿಮೆ ಇರುವುದು ಕಂಡು ಬಂದಿರುತ್ತದೆ. ಇದು ಅವೈಜ್ಞಾನಿಕವಾಗಿದ್ದು ಇದರಿಂದ ಪ್ರಾಧಿಕಾರಕ್ಕೆ ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ನಿಗದಿಪಡಿಸಿರುವ ನಿವೇಶನದ ಮೌಲ್ಯವನ್ನು ಪರಿಷ್ಕರಿಸಿ ಮಾರುಕಟ್ಟೆ ದರದಂತೆ ನಿಗದಿಪಡಿಸಿ ಸರ್ಕಾರಕ್ಕೆ ಹಾಗೂ ಇತರೆ ಸಂಸ್ಥೆಗಳಿಗೆ ಹೆಚ್ಚಿನ ಆದಾಯ ಬರುವಂತೆ ಮಾಡಬಹುದಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯಿಸಲಾಗಿದೆ.

ಪ್ರಾಧಿಕಾರವು 2017–18ರ ಸಾಲಿನಲ್ಲಿ ಕಡತಗಳಲ್ಲಿ ಉತ್ತಮತೆ ಶುಲ್ಕ ಋಣಾತ್ಮಕ ಮೌಲ್ಯ ಕಂಡು ಬಂದಿರುವ ವಿವರಗಳನ್ನು ಅನುಬಂಧ–5 ರಲ್ಲಿ ನೀಡಿದೆ.

21) <u>ನಗರ ಯೋಜನಾ ಮಂಡಳಿಗೆ ಶೇಕಡಾ 5ರ ವಂತಿಕೆ ಪಾವತಿಸದಿರುವುದು</u> :

ಪ್ರಾಧಿಕಾರವು ತಾನು ಸಂಗ್ರಹಿಸಿದ ಉತ್ತಮತೆ ಶುಲ್ಕದ ಶೇಕಡಾ 5 ರಷ್ಟನ್ನು ನಗರ ಯೋಜನಾ ಮಂಡಳಿಗೆ ವಂತಿಕೆ ರೂಪದಲ್ಲಿ ಪಾವತಿಸಬೇಕಾಗಿರುತ್ತದೆ. ಆದರೆ ಸದರಿ ಪ್ರಾಧಿಕಾರವು 2017–18 ರಲ್ಲಿ ವಂತಿಕೆ ಪಾವತಿಸಿರುವುದಿಲ್ಲ. ಲೆಕ್ಕ ತನಿಖಾ ಸಾಲಿನಲ್ಲಿ ಈ ಕೆಳಕಂಡಂತೆ ಉತ್ತಮತೆ ಶುಲ್ಕವನ್ನು ವಸೂಲಿ ಮಾಡಲಾಗಿದೆ.

ಸಾಲು	ಮೊತ್ತ
2017–18	132579
ಒಟ್ಟು	**132579**

22) <u>ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿರಿಸಿದ ನಿವೇಶನ ಹಂಚಿಕೆ ಬಗ್ಗೆ</u> :

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳು (ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿರಿಸಿದ ನಿವೇಶನಗಳ ಹಂಚಿಕೆ) ನಿಯಮಗಳು 1991 ರಂತೆ ಪ್ರಾಧಿಕಾರವು ಖಾಸಗಿ ಬಡಾವಣೆಗಳ ವಿನ್ಯಾಸ ಅನುಮೋದಿಸುವಾಗ ಗುರುತಿಸಲಾದ ಹಾಗೂ ನಾಗರೀಕ ಸೌಲಭ್ಯಗಳಿಗೆ ಮೀಸಲಿರಿಸಿದ ನಿವೇಶನಗಳನ್ನು ಹಾಗೂ ತಾನು ನಿರ್ಮಿಸಿರುವ ಬಡಾವಣೆಯಲ್ಲಿ ಕಾಯ್ದಿರಿಸಿರುವ ನಾಗರೀಕ ಸೌಲಭ್ಯಗಳಿಗೆ ಮೀಸಲಿರಿಸಿದ ನಿವೇಶನಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಹಂಚಿಕೆ ಮಾಡುವ ಅಧಿಕಾರ ಹೊಂದಿರುತ್ತದೆ. ಆದರೆ 2017–18ನೇ ಸಾಲಿನಲ್ಲಿ ನಾಗರೀಕ ಸೌಲಭ್ಯಗಳಿಗೆ ನಿವೇಶನವನ್ನು ಹಂಚಿಕೆ ಮಾಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುತ್ತಾರೆ.

23) <u>ಪಾರ್ಕ್ ಅಭಿವೃದ್ಧಿ ಸೌಲಭ್ಯ / ನಾಗರೀಕ ನಿವೇಶನ ಸೌಲಭ್ಯ ವಿವರಗಳನ್ನು ಸ್ಥಿರಾಸ್ತಿ ವಹಿಯಲ್ಲಿ ದಾಖಲಿಸದಿರುವುದು</u> :

2017–18 ರ ಸಾಲಿನಲ್ಲಿ ವಿನ್ಯಾಸ ಅನುಮೋದನೆಯಾದ ಲೇಔಟ್‌ಗಳಲ್ಲಿ ಪಾರ್ಕ್ ಅಭಿವೃದ್ಧಿಗೆ ಕಾಯ್ದಿರಿಸಿದ ಜಾಗವನ್ನು ಹಾಗೂ ನಾಗರೀಕ ಸೌಲಭ್ಯಗಳಿಗೆ ಮೀಸಲಿರಿಸಿದ ನಿವೇಶನಗಳ ವಿವರಗಳನ್ನು ಪ್ರಾಧಿಕಾರದ ಸ್ಥಿರಾಸ್ತಿ ವಹಿಯ ದಾಖಲೆಯಲ್ಲಿ ದಾಖಲಿಸಬೇಕಿತ್ತು. ಆದರೆ ಈ ಬಗ್ಗೆ ದಾಖಲಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸ್ಥಿರಾಸ್ತಿ ವಹಿಯನ್ನು ನಿರ್ವಹಿಸಿ ವಿವರವನ್ನು ಹಾಜರುಪಡಿಸುವವರೆಗೆ **ರೂ.235743039** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

24) <u>ಪ್ರಾಧಿಕಾರದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಪಾವತಿ ತಃಖ್ತೆಯನ್ನು ಸರ್ಕಾರದ ಮಂಜೂರಾತಿಗೆ ಸಲ್ಲಿಸಿ ಅನುಮೋದನೆ ಪಡೆದಿಲ್ಲ</u> :

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1987 ಸೆಕ್ಷನ್ 51 ರಂತೆ ಪ್ರಾಧಿಕಾರವು ಕಾಲಕಾಲಕ್ಕೆ ಅವಶ್ಯವೆನಿಸುವ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ತಃಖ್ತೆಯನ್ನು ತಯಾರಿಸಿ ಸರಕಾರದ ಮಂಜೂರಾತಿಗೆ ಸಲ್ಲಿಸಬೇಕಾಗಿರುತ್ತದೆ. ಸೂಚಿತ ತಃಖ್ತೆಯಲ್ಲಿ ಪ್ರಾಧಿಕಾರವು ಪ್ರತಿ ಸಿಬ್ಬಂದಿಗೆ ನಿಗದಿಪಡಿಸಿದ ವೇತನ ಶ್ರೇಣಿ, ವೇತನ ಮತ್ತು ಭತ್ಯೆಗಳ ವಿವರಗಳನ್ನು ಅನುಮೋದನೆಗೆ ಸಲ್ಲಿಸಿ ಸರ್ಕಾರದ ಮಂಜೂರಾತಿ ಪಡೆದ ಬಳಿಕ ಪಾವತಿಸಬೇಕಾಗಿರುತ್ತದೆ.

Scanned with OKEN Scanner

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ 239 ಬೆಂರೂಪ್ರಾ 2015, ಬೆಂಗಳೂರು, ದಿನಾಂಕ:7-1-2016 ರಂತೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಿವಿಧ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ವಿಧಿಸಿರುವ ಷರತ್ತುಗಳಂತೆ ಮಂಜೂರಾಗಿರುವ ಹುದ್ದೆಗಳನ್ನು ಮುಂದುವರೆಸಲು ಪ್ರತಿ ವರ್ಷ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆಯಬೇಕಾಗಿರುತ್ತದೆ. ಆದರೆ 2012-13 ರಿಂದ ಸದರಿ ಹುದ್ದೆಗಳನ್ನು ಮುಂದುವರೆಸಲು ಯಾವುದೇ ವರ್ಷ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆದುಕೊಂಡಿರುವುದಿಲ್ಲ. ಸದರಿ ಸರ್ಕಾರಿ ಆದೇಶ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಕೂಡಲೆ ಮಂಜೂರಾದ ಹುದ್ದೆಗಳನ್ನು ಮುಂದುವರೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯಲು ಸೂಚಿಸಿದೆ.

ಸರ್ಕಾರದ ಆದೇಶದಂತೆ ಚಿಕ್ಕಬಳ್ಳಾಪುರ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರಾಗಿರುವ ಹುದ್ದೆಗಳ ವಿವರ ಕೆಳಕಂಡಂತಿದೆ.

ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
ಸಹಾಯಕ ನಗರ ಯೋಜಕ	01	-	01
ನಗರ ಯೋಜಕ ತಾಂತ್ರಿಕ ಸಿಬ್ಬಂದಿ	01	-	01
ಪ್ರಥಮ ದರ್ಜೆ ಸಹಾಯಕ	01	-	01
ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಾಧಿಕಾರಿ	01	-	01
ಸಹಾಯಕ ಅಭಿಯಂತರರು	01	-	01
ಒಟ್ಟು	**05**	**-**	**05**

25) <u>ಪಿಂಚಣಿ ವಂತಿಕೆ</u> :

ಕೆ.ಸಿ.ಎಸ್.ಆರ್. ನಿಯಮ 427 ರಂತೆ ಅನ್ಯ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ & ಸಿಬ್ಬಂದಿ ವರ್ಗದವರ ಪಿಂಚಣಿ ವಂತಿಕೆಯನ್ನು 1/8 ರಂತೆ ಹಾಗೂ ಶೇ:11 ರಂತೆ ರಜಾ ವೇತನ ವಂತಿಕೆ ಕರವನ್ನು ಲೆಕ್ಕಾಚಾರ ಮಾಡಿ ರಾಜ್ಯ ಸಂಚಿತದ ನಿಧಿ ಪಾವತಿಸಬೇಕಾಗಿರುತ್ತದೆ. 2017-18 ರಲ್ಲಿ ಪ್ರಾಧಿಕಾರದಲ್ಲಿ ಇತರ ಇಲಾಖೆಗಳಿಂದ ಅನ್ಯ ಸೇವೆಯ ಮೇರೆಗೆ ಯಾರು ಕರ್ತವ್ಯ ನಿರ್ವಹಿಸದ ಕಾರಣ ಪಿಂಚಣಿ ವಂತಿಕೆ ಪಾವತಿ ಮಾಡಿರುವುದಿಲ್ಲ.

26) <u>ನೂತನ ಪಿಂಚಣಿ ವ್ಯವಕಲನ ಮೊತ್ತವನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಕಟ್ಟದಿರುವುದು</u> :

ನಗರ ಯೋಜಕರು ಇವರು ಏಪ್ರಿಲ್ 2006 ರ ನಂತರ ನೇಮಕ ಹೊಂದಿದ ನೌಕರರಾಗಿದ್ದು, ಪ್ರತಿ ಮಾಹೆ ಅವರ ವೇತನದಿಂದ ಮೂಲ ವೇತನ ಹಾಗೂ ತುಟ್ಟಿಭತ್ಯೆಯ ಮೊತ್ತದ ಶೇಕಡಾ 10 ರಷ್ಟು ವಂತಿಕೆ ಮೊತ್ತ ರೂ.39626 ಗಳ ವಂತಿಕೆ ಕಟಾಯಿಸಿದ್ದು, ಅದನ್ನು ಸಂಬಂಧಪಟ್ಟ ಪ್ರಾನ್ ಸಂಖ್ಯೆಗೆ ಹೊಂದಾಣಿಕೆಯಾಗಿರುವುದಿಲ್ಲ. ಪ್ರಾಧಿಕಾರದ ಶೇಕಡಾ 10 ರಷ್ಟು ವಂತಿಕೆ ಸೇರಿ ನೂತನ ಪಿಂಚಣಿ ಯೋಜನೆಯ ವಂತಿಕೆ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಯ ಪ್ರಾನ್ ಸಂಖ್ಯೆಗೆ ಪಾವತಿ ಮಾಡಿ ಮಾಹಿತಿ ಒದಗಿಸುವವರೆಗೆ **ರೂ.39626** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

27) <u>ನಿಗದಿತ ಅವಧಿಯಲ್ಲಿ ಮಹಾ ಯೋಜನೆ (ಮಾಸ್ಟರ್ ಪ್ಲಾನ್) ತಯಾರಿಸದಿರುವ ಕುರಿತು</u> :

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವು ಪ್ರಾಧಿಕಾರದ ವ್ಯಾಪ್ತಿಗೆ ಬರುವ ಚಿಕ್ಕಬಳ್ಳಾಪುರ ನಗರ ಮತ್ತು ಗ್ರಾಮೀಣ ಪ್ರದೇಶದ ಮಹಾಯೋಜನೆಯನ್ನು ತಯಾರಿಸುವ ಸಲುವಾಗಿ ಟೆಂಡರ್ ಮೂಲಕ ವಿಷನ್ ಸಲ್ಯೂಷನ್ಸ್, ಹುಬ್ಬಳ್ಳಿ ರವರಿಗೆ ದಿನಾಂಕ:18.04.2013 ರಂದು ಕಾರ್ಯದೇಶ (ಕಾರ್ಯಾದೇಶ ಸಂಖ್ಯೆ:ನಯೋಪ್ರಾ/ಚಿಬ/ಮಹಾ ಯೋಜನೆ/ಕರ್ಯಾದೇಶ/01/2012-13/31) ನೀಡಲಾಗಿರುತ್ತದೆ. ಪ್ರಾಧಿಕಾರವು ವಿಷನ್ ಸಲ್ಯೂಷನ್, ಹುಬ್ಬಳ್ಳಿರವ ರೊಂದಿಗೆ ಮಾಡಿಕೊಂಡಿರುವ ಕರಾರಿನಂತೆ (ಕಂಡಿಕೆ-02) ಎರಡು ತಿಂಗಳು ಅವಧಿಯಲ್ಲಿ ಮಹಾಯೋಜನೆಯನ್ನು ತಯಾರಿಸಿ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ. ಆದರೆ ಕಾರ್ಯಾದೇಶ ಪಡೆದುಕೊಂಡು ಮೂರು ವರ್ಷಗಳು ಗತಿಸಿದ್ದರೂ ಇದುವರೆಗೂ ಮಹಾಯೋಜನೆ ತಯಾರಿಸುವ ಕಾರ್ಯವು ಪೂರ್ಣಗೊಂಡಿರುವುದಿಲ್ಲ. ಇದರಿಂದಾಗಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹೊಸದಾಗಿ ನಿರ್ಮಾಣಗೊಳ್ಳುವ ಬಡಾವಣೆಗಳಿಗೆ ಅನುಮೋದನೆ ನೀಡಲು ತೊಂದರೆಯಾಗಿರುತ್ತದೆ. ಇದರಿಂದಾಗಿ ಕರಾರಿನ ಕಂಡಿಕೆ-4 ರಲ್ಲಿ ವಿಧಿಸಿರುವ ಷರತ್ತಿನಂತೆ ವಿಳಂಬದ ಅವಧಿಗೆ ಪ್ರತಿದಿನ ಟೆಂಡರ್ ಮೌಲ್ಯದ ಶೇ.0.3 ರಂತೆ ದಂಡ ವಿಧಿಸಬೇಕಾಗಿರುತ್ತದೆ. ದಂಡದ ಮೊತ್ತವು ಟೆಂಡರ್ ಮೌಲ್ಯದ ಶೇ.10 ರಷ್ಟನ್ನು ತಲುಪಿದ್ದಾಗ್ಯೂ ವಹಿಸಿರುವ ಕಾರ್ಯವು ಪೂರ್ಣಗೊಳ್ಳದಿದ್ದಲ್ಲಿ ಟೆಂಡರ್‌ನ್ನು ರದ್ದುಗೊಳಿಸಬಹುದಾಗಿರುತ್ತದೆ. ಆದರೆ ಪ್ರಾಧಿಕಾರವು ವಿಳಂಬದ ಅವಧಿಗೆ ದಂಡವನ್ನೂ ವಿಧಿಸಿರುವುದಿಲ್ಲ, ಟೆಂಡರನ್ನೂ ರದ್ದುಪಡಿಸಿರುವುದಿಲ್ಲ. ಇದರಿಂದ ಪರೋಕ್ಷವಾಗಿ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆ. ಅಲ್ಲದೆ ಮಹಾ ಯೋಜನೆಯ ಅಲಭ್ಯತೆಯಲ್ಲಿ ಬಡಾವಣೆಗಳನ್ನು ಅನುಮೋದಿಸುತ್ತಿರುವುದು ನಿಯಮಬಾಹಿರವಾಗಿರುತ್ತದೆ. ಇದರಿಂದಾಗಿ ಮುಂದಿನ

Scanned with OKEN Scanner

ದಿನಗಳಲ್ಲಿ ಬಡಾವಣೆಗಳನ್ನು ಅಥವಾ ಬಡಾವಣೆಗಳಲ್ಲಿನ ರಸ್ತೆ ಮೊದಲಾದ ಸಾರ್ವಜನಿಕ ಸೌಲಭ್ಯಗಳನ್ನು ಹೊಂದಾಣಿಕೆ ಮಾಡಲು ತೊಂದರೆಯಾಗುವ ಸಂಭವಗಳಿರುತ್ತವೆ.

28) ಕಟ್ಟಡ ಬಾಡಿಗೆ ಪಾವತಿಯಲ್ಲಿ ಆದಾಯ ತೆರಿಗೆಯನ್ನು ಕಟಾಯಿಸದಿರುವುದು :

2017-18 ರ ಸಾಲಿನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ಕಟ್ಟಡ ಬಾಡಿಗೆಯನ್ನು ಶ್ರೀ ಎನ್.ಪ್ರಸಾದ್ ರವರಿಗೆ ಪಾವತಿಸಲು ರೂ.21200 ಗಳಂತೆ 11 ತಿಂಗಳಿಗೆ ಒಟ್ಟು ಮೊತ್ತ ರೂ.233200 ಗಳನ್ನು ಪಾವತಿಸಲಾಗಿದೆ. ನಿಯಮಾನುಸಾರ ಆದಾಯ ತೆರಿಗೆ ಕಾಯ್ದೆ 1961 ರ ಪ್ರಕರಣ 194 (ಐ) ರಂತೆ ಶೇ:2 ರ ದರದಲ್ಲಿ ರೂ.4664 ಗಳನ್ನು ಮಾತ್ರ ಬಿಲ್ಲುಗಳಲ್ಲಿ ಕಡಿತ ಮಾಡಲಾಗಿದ್ದು ರೂ.18656 ಗಳನ್ನು ಕಡಿತ ಮಾಡದೆ ಕೈಬಿಡಲಾಗಿರುತ್ತದೆ. ಸದರಿ ಮೊತ್ತವನ್ನು ಶ್ರೀ ಎನ್.ಪ್ರಸಾದ್ ರವರಿಂದ ವಸೂಲಿಸಿ ಆದಾಯ ತೆರಿಗೆ ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವವರೆಗೆ **ರೂ.18656** ಗಳನ್ನು ವಸೂಲಾತಿಗೆ ಸೂಚಿಸಿದೆ.

29) ಲೆಕ್ಕ ತನಿಖಾ ಶುಲ್ಕದ ಬಗ್ಗೆ :

ಲೆಕ್ಕ ಶೀರ್ಷಿಕೆ :

0070	ಇತರೆ ಆಡಳಿತ ಸೇವೆಗಳು
60	ಇತರೆ ಸೇವೆಗಳು
110	ಸರ್ಕಾರಿ ಲೆಕ್ಕ ಪರಿಶೋಧನಾ ಶುಲ್ಕ
0-01	ಲೆಕ್ಕ ಪರಿಶೋಧನಾ ಶುಲ್ಕ

ಪ್ರಾಧಿಕಾರವು ಸರ್ಕಾರಕ್ಕೆ ಪಾವತಿಸಬೇಕಾದ ಲೆಕ್ಕ ತನಿಖಾ ಶುಲ್ಕದ ಲೆಕ್ಕಾಚಾರ ಈ ಕೆಳಕಂಡಂತಿದೆ.

1-4-2017 ಕ್ಕೆ ಪ್ರಾರಂಭಿಕ ಶಿಲ್ಕು	39792
2017-18 ರ ಬೇಡಿಕೆ	76386
ಒಟ್ಟು	116178
2017-18 ರ ಪಾವತಿ	-
31-3-2018 ಕ್ಕೆ ಬಾಕಿ	116178

30) ಸಾಮಾನ್ಯ ಅಭಿಪ್ರಾಯ :

1. ಪ್ರತ್ಯೇಕ ಖಾತೆವಾರು (ಯೋಜನೆವಾರು) ನಗದು ಪುಸ್ತಕ ನಿರ್ವಹಿಸುವುದು
2. ಹೂಡಿಕೆಗಳ ವಹಿಯನ್ನು ನಿಗಧಿತ ವಹಿಯಲ್ಲಿ ನಿರ್ವಹಿಸಿ ವರ್ಷದ ಅಂತ್ಯದಲ್ಲಿ ಘೋಷ್ವಾರೆ ನಮೂದಿಸುವುದು
3. ಮುಂಗಡಗಳು ಮತ್ತು ಸಾಲಗಳ ಬಗ್ಗೆ ನಿಗದಿತ ಪ್ರತ್ಯೇಕ ವಹಿಗಳನ್ನು ನಿರ್ವಹಿಸುವುದು
4. ರಸೀದಿ ಪುಸ್ತಕಗಳು ಪ್ರಮುಖವಾಗಿದ್ದು, ಅವುಗಳನ್ನು ಸರಿಯಾದ ರೀತಿ ಮುದ್ರಿಸಿಕೊಂಡು ಕ್ರಮಬದ್ಧವಾಗಿ ಇರಿಸುವುದು
5. ಪ್ರಾಧಿಕಾರದ ಚರ-ಸ್ಥಿರ ಆಸ್ತಿಗಳ ಬಗ್ಗೆ ಅಗತ್ಯ ಭದ್ರತೆ ವ್ಯವಸ್ಥೆ ಹಾಗೂ ಸೂಕ್ತ ವಹಿಯನ್ನು ನಿರ್ವಹಿಸುವುದು
6. ಪ್ರಾಧಿಕಾರದಲ್ಲಿ ಹೆಚ್ಚು ಆರ್ಥಿಕ ವಹಿವಾಟುಗಳು ನಡೆಸುತ್ತಿದ್ದು, ಆರ್ಥಿಕವಾಗಿ ಸದೃಢತೆವಾಗಿರುವ ಇಂತಹ ಸಂಸ್ಥೆಗೆ ಒಬ್ಬ ಲೆಕ್ಕಾಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು ಮತ್ತು ನಗದು ಸಹಾಯಕರುಗಳ ಅವಕಶ್ಯಕತೆ ಬಹಳ ಇದ್ದು ಆರ್ಥಿಕ ವ್ಯವಹಾರ ಹಾಗೂ ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸಹಾಯಕವಾಗಿರುತ್ತದೆ.
7. ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ಕಾಯ್ದೆಯ ಸೆಕ್ಷನ್ 18 ರಂತೆ ಪ್ರಾಧಿಕಾರವು ಭೂ ಪರಿವರ್ತನೆಗೊಂಡ ಪ್ರಕರಣಗಳಲ್ಲಿ ಬಡಾವಣೆ ನಕ್ಷೆಯನ್ನು ಅನುಮೋದಿಸುವಾಗ ಪರಿಷ್ಕೃತ ಹೆಚ್ಚುವರಿ ಭೂ ಮೌಲ್ಯದ 1/3 ಭಾಗ ಮೀರದಂತೆ ಉತ್ತಮತೆ ಶುಲ್ಕ ವಸೂಲಿ ಮಾಡಬೇಕೆಂಬ ನಿಬಂಧನೆ ಇದ್ದರೂ ಪ್ರಾಧಿಕಾರವು 1994 ರಲ್ಲಿ ನಿಗಧಿಪಡಿಸಿರುವ ದರಗಳಂತೆಯೇ ಉತ್ತಮತೆ ಶುಲ್ಕ ಸಂಗ್ರಹಿಸುತ್ತಿರುವುದರಿಂದ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಗಳಷ್ಟು ನಷ್ಟ ಉಂಟಾಗಿದೆ ಎಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯ ಪಡಲಾಗಿದೆ. ಸರ್ಕಾರವು ಆಗ್ಗಿಂದಾಗ್ಗೆ ಪರಿಷ್ಕರಣೆ ಮಾಡಿರುವ ಮಾರ್ಗಸೂಚಿ ಭೂ ಮೌಲ್ಯಗಳಂತೆ ಉತ್ತಮತೆ ಶುಲ್ಕದ ದರಗಳನ್ನು ಜರೂರಾಗಿ ಪರಿಷ್ಕರಣೆ ಮಾಡುವ ಕ್ರಮ ಅವಶ್ಯಕವಾಗಿದೆ. ಪಿಂಚಣಿ ನಿಧಿಯನ್ನು ಪ್ರಾಧಿಕಾರಕ್ಕೆ ಲಾಭದಾಯಕವಾಗುವಂತೆ ರಾಷ್ಟ್ರೀಕೃತ ಬ್ಯಾಂಕುಗಳ ನಿಶ್ಚಿತ ಠೇವಣಿಯಲ್ಲಿ ತೊಡಗಿಸಬಹುದಾಗಿದೆ.

ಮೇಲ್ಕಂಡ ಅಂಶಗಳ ಬಗ್ಗೆ ಪ್ರಾಧಿಕಾರದ ಆಡಳಿತ ವರ್ಗದಿಂದ ಸೂಕ್ತ ಕ್ರಮ ಅವಶ್ಯಕ ಎಂದು ಲೆಕ್ಕ ಪರಿಶೋಧನೆಯ ಅಭಿಪ್ರಾಯವಾಗಿದೆ.

ಹಿರಿಯ ಉಪ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ತುಮಕೂರು.

Scanned with OKEN Scanner

ಅನುಬಂಧ-I

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2017-18 ರ ಸಾಲಿನ ಬ್ಯಾಂಕ್ ಖಾತೆಗಳಂತೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ವಿವರಗಳು

ಸಾಲು	ಖಾತೆಯ ವಿವರ	ಬ್ಯಾಂಕಿನ ಹೆಸರು	ಖಾತೆ ಸಂಖ್ಯೆ	ಪ್ರಾರಂಭ ಶಿಲ್ಕು	ಸ್ವೀಕೃತಿ	ಜುಮ್ಲಾ	ವೆಚ್ಚ	ಅಂತಿಮ ಶಿಲ್ಕು
2017-18	ಉತ್ತಮತೆ & ಇತರೆ ಶುಲ್ಕಗಳು	ವಿಜಯಾ ಬ್ಯಾಂಕ್	127601101000296	1658209	22161694	23819903	8390012	15429891
2017-18	ಕೆರೆ ಅಭಿವೃದ್ಧಿ ಶುಲ್ಕ	ಎಸ್.ಬಿ.ಎಂ	64139750278	10412778	8249781	18662559	13500236	5162323
2017-18	ಎಫ್.ಡಿ. ಖಾತೆ	ಸಿಬಿಐ	3561260673	1546775	17312	1564087	1500000	64087
2017-18	ಸಿಎ ನಿವೇಶನ	ಬ್ಯಾಂಕ್ ಆಫ್ ಇಂಡಿಯಾ	846310110012945	0	2191676	2191676	18	2191658
		ಒಟ್ಟು		**13617762**	**32620463**	**46238225**	**23390266**	**22847959**

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

Scanned with OKEN Scanner

ಅನುಬಂಧ–2

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2017–18 ರ ಸಾಲಿನ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳು

ಜಮಾ ವಿವರ	ಮೊತ್ತ	ಖರ್ಚಿನ ವಿವರ	ಮೊತ್ತ
ಪರಿಶೀಲನಾ ಶುಲ್ಕ	358815	ಅಧ್ಯಕ್ಷರ ಗೌರವಧನ ಮತ್ತು ಮನೆ ಬಾಡಿಗೆ ಭತ್ಯೆ	209000
ಉತ್ತಮತೆ ಶುಲ್ಕ	2651579	ನಗರ ಯೋಜಕ ಸದಸ್ಯರ ವೇತನ	7750
ವಿನ್ಯಾಸ ನಕ್ಷೆ ತಯಾರಿಕೆ ಶುಲ್ಕ	55870	ಅಧ್ಯಕ್ಷರ ವಾಹನದ ಇಂಧನ ವೆಚ್ಚ	281386
ವಿನ್ಯಾಸ ಅಭಿವೃದ್ಧಿ/ಮೇಲ್ವಿಚಾರಣೆ ಶುಲ್ಕ	1453483	ಆಯುಕ್ತರ ವೇತನ	1968875
ಕಟ್ಟಡ ನಕ್ಷೆ ಅನುಮೋದನೆ ಶುಲ್ಕ	9000	ಹೊರಗುತ್ತಿಗೆ ನೌಕರರ ವೇತನ	1055277
ಕೆರೆಗಳ ಪುನಶ್ಚೇತನ ಶುಲ್ಕ	8358525	ಜಾಹಿರಾತು ವೆಚ್ಚ	63918
ವಿನ್ಯಾಸ ಅರ್ಜಿ ಮಾರಾಟ ಶುಲ್ಕ	1400	ಅಂಚೆ ಚೀಟಿಗಳ ಖರೀದಿ	15000
ಧೃಢೀಕೃತ ಪ್ರತಿಗಾಗಿ ಶುಲ್ಕ	3960	ಕಛೇರಿ ಕಟ್ಟಡದ ಬಾಡಿಗೆ	228112
ಮಾಹಿತಿ ಹಕ್ಕು ಶುಲ್ಕ	940	ಕಛೇರಿ ಕಟ್ಟಡದ ವಿದ್ಯುತ್ ಬಿಲ್	13099
ಟೆಂಡರ್ ಅರ್ಜಿ ನಮೂನೆ ಶುಲ್ಕ	2000	ಮುದ್ರಣ ಮತ್ತು ಲೇಖನ ಸಾಮಗ್ರಿ ವೆಚ್ಚ	27999
ಟೆಂಡರ್ ಇ.ಎಂ.ಡಿ. ಶುಲ್ಕ	19000	ಪೀಠೋಪಕರಣಗಳ & ಯಂತ್ರೋಪಕರಣ ವೆಚ್ಚ	26190
ಇತರೆ	2204036	ದಿನಪತ್ರಿಕೆ ನಿಯತಕಾಲಿಕೆ ವೆಚ್ಚ	2220
ಹೆಚ್ಚುವರಿ ಪಾವತಿ ಮೊತ್ತ	1855	ಹೂಡಿಕೆಗಳು	17500000
ಹೂಡಿಕೆಗಳು	17500000	ಕಛೇರಿ ನಿರ್ವಹಣೆ	26860
		ಚಾರ್ಟರ್ಡ್ ಅಕೌಂಟೆಂಟ್ ಆಡಿಟ್ ಬಿಲ್	120000
		ಉತ್ತಮತೆ ಶುಲ್ಕ (5% ಟಿಸಿಪಿ)	311912
		ಇಂಟರ್‌ನೆಟ್ ಬಿಲ್	399
		ಆರ್ಕಿಟೆಕ್ಟ್	200700
		ಪ್ರಿಂಟೆಡ್ ರಸೀದಿ ಪುಸ್ತಕ	17724
		ಇತರೆ ವೆಚ್ಚ	1313845
ಒಟ್ಟು	**32620463**	ಒಟ್ಟು	**23390266**

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಚಿಕ್ಕಬಳ್ಳಾಪುರ.

Scanned with OKEN Scanner

2017–18ನೇ ಸಾಲಿನ ಜಮಾ ವಿವರಗಳು

ತಿಂಗಳು &ವರ್ಷ	ಪರಿಶೀಲನಾ ಶುಲ್ಕ	ಉತ್ತಮತೆ ಶುಲ್ಕ	ವಿನ್ಯಾಸ ನಕ್ಷೆ ತಯಾರಿಕ ಶುಲ್ಕ	ಕೆರೆಗಳ ಪುನಶ್ಚೇತನ ಶುಲ್ಕ	ಕಟ್ಟಡ ನಕ್ಷೆ ಅನುಮೋದನೆ ಶುಲ್ಕ	ವಿನ್ಯಾಸ ಅಭಿವೃದ್ಧಿ/ ಮೇಲ್ವಿಚಾರಣೆ ಶುಲ್ಕ	ವಿನ್ಯಾಸ ಅರ್ಜಿ ಮಾರಾಟ ಶುಲ್ಕ	ದೃಢೀಕೃತ ಪ್ರತಿಗಾಗಿನ ಶುಲ್ಕ	ಮಾಹಿತಿ ಹಕ್ಕು ಶುಲ್ಕ	ಟೆಂಡರ್ ಅರ್ಜಿ ನಮೂನೆ ಶುಲ್ಕ	ಟೆಂಡರ್ ಇ.ಎಂ.ಡಿ ಶುಲ್ಕ	ಇತರೆ ಶುಲ್ಕ	ಹೆಚ್ಚುವರಿ ಪಾವತಿ	ಬ್ಯಾಂಕ್ ಬಡ್ಡಿ	ಒಟ್ಟು
ಏಪ್ರಿಲ್–17.	172290	521105	16100	3182500	500	599963	0	0	100	0			155	16366	4509079
ಮೇ–17	235902	395604	13075	2540000	2500	184200	200	250	0	0			0	0	3371731
ಜೂನ್–17	128715	143850	3070	575000	500	889300	0	400	100	0			0	94870	1835805
ಜುಲೈ–17	139500	127900	3000	946625	0	196000	100	310	140	0			0	18247	1431822
ಆಗಸ್ಟ್–17	22300	67300	2200	331100	0	0	0	500	0	0				0	423400
ಸೆಪ್ಟೆಂಬರ್–17	500	16500	0	0	0	303800	100	200	0	0			0	35597	356697
ಅಕ್ಟೋಬರ್–17	1500	138400	0	5600	0	2702200	200							12589	2860489
ನವೆಂಬರ್–17	32600	31100	500	111950	1500	2166000	0	500	500	0			0	0	2344650
ಡಿಸೆಂಬರ್–17	314704	251100	3500	3400	1500	3305900	0	1000	0	800			0	37807	3919711
ಜನವರಿ–18	128700	57500	2500	70300	500	497900	500	400		1200	9000		100		768600
ಫೆಬ್ರವರಿ–18	239830	277500	8675	592050	2000	3024550	200	400	100		10000	169200	1000		4325505
ಮಾರ್ಚ್–18	111235	623720	3250			1307775	100						600		2046680
ಒಟ್ಟು	1527776	2651579	55870	8358525	9000	15177588	1400	3960	940	2000	19000	169200	1855	215476	28194169

ಹಿರಿಯ ಉಪ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಚಿಕ್ಕಬಳ್ಳಾಪುರ.

Scanned with OKEN Scanner

Expend-2017-18

Month & Year	Chairman Honorarium	Chairman vehicle decel & Driver	Members Salary	officers Salary	Out Sources Employees salary	office rent	Electricity Bill	Post Stamps	Paper Advtegment bill	Stationary	farnitur e& Electronics	Daily news paper bill	Office Maintains bill	Chatted Accounta Auditent bill	Bank Charges	Bettetment Fees 5% TCP	Internet bill	Architec	Printed Recipite book	other miscellaneous	Total Amount
Apr-17	0	0	0	0	0	0	2344	0	0	0	0	0	2100	90000	0	0				9024	103468
May-17	19000	25957		124968	96502	21200	1463						2600							8515	300205
Jun-17	19000	26023	7750	124968	96502	21200	1540				13990		844		503					22400	334720
Jul-17	19000	25181		162565	88782	19504	958						5936		910	311912				5545	640293
Aug-17	19000	24402		174008	97042	20776	1176	5000	7000	4652			944	30000	690					12500	397190
Sep-17	19000	24545		176441	97039	20776	996		26693			1020			25					9515	376050
Oct-17	19000	25344		174774	97039		520			4277	9600									7500	338054
Nov-17	19000	25206		184097	97039	41552	856		3225						2441					15709	389125
Dec-17	19000	25707		177104	97039	20776	805		12000	4700			1888							3600	362619
Jan-18	38000	25596		354208	194078	41552	901	5000	15000	4170	2600						399	200700	17724	23088	923016
Feb-18		26592					753			7600		1200	6548							46505	89198
Mar-18	19000	26833		315742	94215	20776	787	5000		2600					1345					8600	494898
																					0
Total	209000	281386	7750	1968875	1055277	228112	13099	15000	63918	27999	26190	2220	20860	120000	5914	311912	399	200700	17724	172501	4748836

ಹಿರಿಯ ಉಪ ನಿರ್ದೇಶಕರು
ಪ್ರಾದೇಶಿಕ ಲೆಕ್ಕಪರಿಶೋಧನಾ ವಲಯ-II
ಬೆಳಗಾವಿ.

Scanned with OKEN Scanner

2017-18 FD's Details							
Sl.No	Bank Name	FD Band No	Value Date	Value Amount	Rate of Int	Maturiy Date	Maturiy Amount
1	SBM	A683825	31.05.2017	67,50,000.00	6.09%	31.05.2018	72,27,940.00
2		A683826	31.05.2017	67,50,000.00	6.09%	31.05.2018	72,27,940.00
3	Vijaya Bank	489862	07.12.2017	57,30,204.00	6%	07.12.2018	60,51,925.00
4		489861	07.12.2017	57,30,204.00	6%	07.12.2018	60,51,925.00
5		489860	07.12.2017	57,30,204.00	6%	07.12.2018	60,51,925.00
6		489859	07.12.2017	57,30,204.00	6%	07.12.2018	60,51,925.00
7	SBI	683227	23.02.2018	56,95,337.00	6.25%	23.02.2019	60,59,726.00
8		683228	23.02.2018	56,95,337.00	6.25%	23.02.2019	60,59,726.00
9		683229	23.02.2018	56,95,337.00	6.25%	23.02.2019	60,59,726.00
10		683230	23.02.2018	56,95,337.00	6.25%	23.02.2019	60,59,726.00
11		683231	23.02.2018	20,50,320.00	6.25%	23.02.2019	21,81,500.00
12	Central Bank	222872	01.06.2017	15,00,000.00	6.6 %	01.06.2018	16,01,477.00
13	Vijaya Bank	681001	01.06.2017	25,00,000.00	6.50%	01.06.2018	26,66,504.00
14	Central Bank	222835	03.09.2017	53,07,422.00	6.60%	03.09.2018	56,66,477.00
15		222834	06.09.2017	53,07,416.00	6.60%	06.09.2018	56,66,471.00
16		222842	14.10.2017	90,15,447.00	6.60%	14.10.2018	96,25,356.00
17		222843	14.10.2018	53,03,204.00	6.60%	14.10.2018	56,61,974.00
18		222844	14.10.2019	53,03,204.00	6.60%	14.10.2018	56,61,974.00
Grand Total Amount				954,89,177.00			1016,34,217.00

ಹಿರಿಯ ಉಪ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಚಿಕ್ಕಬಳ್ಳಾಪುರ.

Scanned with OKEN Scanner

2017–18 ರ ಸಾಲಿನ ಕಡತಗಳಲ್ಲಿ ಉತ್ತಮತೆ ಶುಲ್ಕ ಋಣಾತ್ಮಕ ಮೌಲ್ಯ ಕಂಡು ಬಂದಿರುವ ವಿವರ

Sl No	Name of the Village /Area	Survey No's	Cost of Land/ Acre (As Per Guidance Value)	Developemnt Cost per Acre	Total Cost per Acre (1+2)	Price per Sq. Mtr (As per Guidance Value)	Total Land in Sq. Mtr	Saleable Land in Sq. Mtr. (55% of 5)	Sale Price (4x6)	Profit (7-3)	Increase in Market Value Per Sq. Mtr (8/6)	1/3 of the increase in Market Value/Sq. Mtr	Betterment Fee Collected per Sq. Mtr	Loss due to non implementation of provisions of Section 18 of KUDA Act per Sq. Mtr	Total Loss
1	2	3	4	5	6	7	8	9	10	11	12	13	14	15	16
1	ಬೇಡಗಾನಹಳ್ಳಿ	49/2	2200000	2000000	4200000	6000	128057.08	70,431.39	422,588,364.00	418,388,364.00	5,940.37	1,980.12	3	1977.12	139,251,493.82
2	ಶಿಡ್ಲಘಟ್ಟ ಬಾಗಿಲು	122/6	3300000	2000000	5300000	5700	1770.47	973.76	5,550,423.45	250,423.45	257.17	85.72	3	82.72	80,553.21
3	ಕಂದವಾರ	196/1	2200000	2000000	5300000	4800	17401.48	9,570.81	45,939,907.20	40,639,907.20	4,246.23	1,415.41	3	1412.41	13,517,923.29
4	ಮುಷ್ಟೂರು	218/4	5500000	2000000	4200000	3600	3692.7	2,030.99	7,311,546.00	3,111,546.00	1,532.04	510.68	3	507.68	1,031,089.05
5	ಅಂಗಟ್ಟ	42/2	3000000	2000000	7500000	10000	60905.24	33,497.88	334,978,820.00	327,478,820.00	9,776.11	3,258.70	3	3255.70	109,059,113.02
6	ಅಮಾನಿ ಮಂಚನಬಲೆ ಕೆರೆ	59/2	1600000	2000000	5000000	1800	18302.01	10,066.11	18,118,989.90	13,118,989.90	1,303.28	434.43	3	431.43	4,342,798.32
7	ಅಂಕಣಗೊಂದಿ	22/1	2200000	2000000	3600000	4800	6980.8	3,839.44	18,429,312.00	14,829,312.00	3,862.36	1,287.45	3	1284.45	4,931,585.68
8	ಶಿಡ್ಲಘಟ್ಟ ಬಾಗಿಲು	10	3300000	2000000	4200000	5700	18160.25	9,988.14	56,932,383.75	52,732,383.75	5,279.50	1,759.83	3	1756.83	17,547,496.84
9	ವಾಪಸಂದ್ರ	110/6	4000000	2000000	5300000	4800	6930.2	3,811.61	18,295,728.00	12,995,728.00	3,409.51	1,136.50	3	1133.50	4,320,474.50
10	ಹೊನ್ನೇನಹಳ್ಳಿ	12/3	6600000	2000000	6000000	6000	4046.86	2,225.77	13,354,638.00	7,354,638.00	3,304.31	1,101.44	3	1098.44	2,444,868.68
11	ಕುಡುವತಿ	195	3030000	2000000	8600000	7900	11027.65	6,065.21	47,915,139.25	39,315,139.25	6,482.08	2,160.69	3	2157.69	13,086,850.79
12	ಗಂಗನಮಿದ್ದೆ	45/3	5500000	2000000	5030000	5200	3035.1	1,669.31	8,680,386.00	3,650,386.00	2,186.77	728.92	3	725.92	1,211,787.42
13	ಅಣಕನೂರು	121/1	3000000	2000000	7500000	4500	8093.72	4,451.55	20,031,957.00	12,531,957.00	2,815.19	938.40	3	935.40	4,163,964.36
14	ತಾಮಕಲಹಳ್ಳಿ	25/1,2,3	6600000	2000000	5000000	4500	15479.19	8,513.55	38,310,995.25	33,310,995.25	3,912.70	1,304.23	3	1301.23	11,078,124.42
15	ಪಟ್ರೇನಹಳ್ಳಿ	157	1600000	2000000	8600000	2400	22712.96	12,492.13	29,981,107.20	21,381,107.20	1,711.57	570.52	3	567.52	7,089,559.35
															333,157,682.75

ಹಿರಿಯ ಉಪ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಚಿಕ್ಕಬಳ್ಳಾಪುರ.

Scanned with OKEN Scanner

Sl No	Name of the Village /Area	Survey No's	Cost of Land/ Acre (As Per Guidance Value)	Developemnt Cost per Acre	Total Cost per Acre (1+2)	Price per Sq. Mtr (As per Guidance Value)	Total Land in Sq. Mtr	Saleable Land in Sq. Mtr. (55% of 5)	Sale Price (7 x 9)	Profit (10-6)	Increase in Market Value Per Sq. Mtr (11 / 9)	1/3 of the increase in Market Value/Sq. Mtr	Betterment Fee Collected per Sq. Mtr	Loss due to non implementation of provisions of Section 18 of KUDA	Total Loss
1	2	3	4	5	6	7	8	9	10	11	12	13	14	15	16
1	ವಾಪಸಂದ್ರ	185	4400000	2000000	6400000	5200	1998.1	1,098.96	5,714,566.00	(685,434.00)	(623.71)	(207.90)	3	-210.90	(231,774.87)
2	ಗಂಗನಮಿದ್ದೆ	27/12	7500000	2000000	9500000	6000	202.34	111.29	667,722.00	(8,832,278.00)	(79,364.87)	(26,454.96)	3	-26457.96	(2,944,426.53)
3	ಅಂಗಟ್ಟಿ	66/9	3000000	2000000	9500000	10000	1315.21	723.37	7,233,655.00	(2,266,345.00)	(3,133.06)	(1,044.35)	3	-1047.35	(757,618.43)
4	ಆಮಾನಿ ಕಂದವಾರ ಕೆರೆ	178/23	8000000	2000000	5000000	5300	961.11	528.61	2,801,635.65	(2,198,364.35)	(4,158.76)	(1,386.25)	3	-1389.25	(734,373.95)
5	ಚೊಕ್ಕಹಳ್ಳಿ	69/7	6600000	2000000	10000000	6000	1011.7	556.44	3,338,610.00	(6,661,390.00)	(11,971.55)	(3,990.52)	3	-3993.52	(2,222,132.64)
6	ಕೊತ್ತನೂರು	72/2	8556000	2000000	8600000	6000	2529.25	1,391.09	8,346,525.00	(253,475.00)	(182.21)	(60.74)	3	-63.74	(88,664.93)
7	ಚದಲಮರ	38/2	7150000	2000000	10556000	5500	1112.87	612.08	3,366,431.75	(7,189,568.25)	(11,746.15)	(3,915.38)	3	-3918.38	(2,398,358.99)
8	ಆಮಾನಿ ಕಂದವಾರ ಕೆರೆ	101/2	8000000	2000000	9150000	5300	809.36	445.15	2,359,284.40	(6,790,715.60)	(15,254.96)	(5,084.99)	3	-5087.99	(2,264,907.31)
															(11,642,257.63)

ಹಿರಿಯ ಉಪ ನಿರ್ದೇಶಕರು
ನಗರೀಯ ಯೋಜನಾ ಪರಿಶೋಧನಾ ವಲಯ
ಮೈಸೂರು.

Scanned with OKEN Scanner

2017–18 ರ ಸಾಲಿನಲ್ಲಿ ಅನುಮೋದನೆಗೊಂಡಿರುವ ವಿನ್ಯಾಸ ನಕ್ಷೆಯಲ್ಲಿನ ಸಾರ್ವಜನಿಕ ಸೌಲಭ್ಯ ಜಾಗಗಳ ವಿಸ್ತೀರ್ಣದ ವಿವರ

ಕ್ರ.ಸಂ.	ಗ್ರಾಮ	ಸರ್ವೆ ಸಂಖ್ಯೆಗಳು	ವಿಸ್ತೀರ್ಣ ಎಕರೆ–ಕುಂಟೆ	ವಸತಿ ವಿಸ್ತೀರ್ಣ	ಉದ್ಯಾನವನ ವಿಸ್ತೀರ್ಣ	ನಾಗರೀಕ ಸೌಲಭ್ಯ ವಿಸ್ತೀರ್ಣ	ರಸ್ತೆ ವಿಸ್ತೀರ್ಣ	ವಾಣಿಜ್ಯ ವಿಸ್ತೀರ್ಣ	ಪಾರ್ಕಿಂಗ್ ವಿಸ್ತೀರ್ಣ
1	ಬೀಡಗಾನಹಳ್ಳಿ	49/2 & ಇತರೆ	31.25 3/4 ಎ	67520.96	12815.82	6412.94	41306.2	–	–
2	ಗಂಗನಮಿದ್ದೆ	27/12	0.02 ಗುಂ	–	20.63	–	30.53	133.18	18
3	ಶಿಡ್ಲಘಟ್ಟ ಬಾಗಿಲು	122/6	17 1/2 ಗುಂ	961.77	265.64	–	543.06	–	–
4	ಮುಸ್ಟೂರು	218/4 219/1&2	36.08	1879.14	557.5	–	1256.06	–	–
5	ಅಂಗಟ್ಟೆ	42/2 & ಇತರೆ	15–02 ಎ	30950.87	6097.53	3086.73	20769.21	–	–
6	ಅಮಾನಿ ಮಂಚನಬಲೆ ಕೆರೆ	59/2 & ಇತರೆ	4–21 ಎ	8418.76	1950.65	921.16	7021.2	–	–
7	ಅಂಕಣಗೊಂದಿ	22/1,2,3,4	1–24 ಎ	3627.99	372.07	350.87	2528.63	–	–
8	ಶಿಡ್ಲಘಟ್ಟ ಬಾಗಿಲು	10, 11/3	4.19 ಎ	9947.9	982.53	940.66	6289.02	–	–
9	ಹೊನ್ನೇನಹಳ್ಳಿ	12/3	1ಎ	3139.25	412.16	–	283.25	–	212.2
10	ಅಮಾನಿ ಕಂದವಾರ ಕೆರೆ	178/2,3	0.91/2 ಗುಂ	–	98.66	–	55.18	748.58	58.69
11	ಚೊಕ್ಕಹಳ್ಳಿ	69/7	0.10	–	107.57	–	107.49	744.89	51.75
12	ಕೊತ್ತನೂರು	72/2	0.25 ಗುಂ	–	254.77	–	82.57	2059.91	132
	ಒಟ್ಟು		**126446.64**	–	**23935.53**	**11712.36**	**80272.4**	**3686.56**	**472.64**

ಹಿರಿಯ ಉಪ ನಿರ್ದೇಶಕರು
ನಗರ ಯೋಜನೆ ಲಕ್ಷಪರಿಶೋಧನಾ ವರ್ತುಲ
ಚಿಕ್ಕಬಳ್ಳಾಪುರ.

Scanned with OKEN Scanner